ಇ) 2006–07ನೇ ಸಾಲಿನಲ್ಲಿ ಮಂಜೂರಾಗಿರುವ ಪ್ರೌಢಶಾಲೆಗಳಿಗೆ ಈ ವರ್ಷದ ಆಯವ್ಯಯದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

970 ಸಹ ಶಿಕ್ಷಕರ, 485 ಮುಖ್ಯ ಶಿಕ್ಷಕರ ಹಾಗೂ 485 "ಡಿ" ದರ್ಜೆ ನೌಕರರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

ಸದರಿ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಬಡ್ತಿ ಮೂಲಕ ತುಂಬಲಾಗುತ್ತಿದೆ. ಅಲ್ಲಿಯವರೆಗೆ ತಾತ್ಕಾಲಿಕವಾಗಿ ನಿವೃತ್ತ ಶಿಕ್ಷಕರನ್ನು ಸಂಚಿತ ವೇತನದೊಂದಿಗೆ ಸದರಿ ಶಾಲೆಗಳಿಗೆ 3 ತಿಂಗಳ ಅವಧಿಗೆ ನೇಮಕ ಮಾಡಲು ಜಿಲ್ಲೆಗಳಿಗೆ ಅಧಿಕಾರ ನೀಡಲಾಗಿದೆ.

ಈ) ಸಹ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರ ಖಾಲಿ ಹುದ್ದೆ ತುಂಬಲು ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. "ಡಿ" ದರ್ಜೆ ನೌಕರರ ಹುದ್ದೆಗಳನ್ನು ಅನುಕಂಪದ ಆಧಾರದ ನೇಮಕಾತಿ ಮೂಲಕ ತುಂಬಲಾಗುತ್ತಿದೆ.

1003 (753) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಮುಂದಿನ ಸಾರ್ವಜನಿಕ ವರ್ಗಾವಣೆ ಸಮಯದಲ್ಲಿ ಸರ್ಕಾರವು ಶಿಕ್ಷಕರ ವರ್ಗಾವಣೆ ಕುರಿತು ಹೊಸದಾಗಿ ನಿಯಮವನ್ನು ಜಾರಿಗೊಳಿಸಲಾಗುವುದೆ;

ಆ) ಹಾಗಿದ್ದಲ್ಲಿ, ಯಾವ ಆಧಾರದ ಮೇಲೆ ಶಿಕ್ಷಕರ ವರ್ಗಾವಣೆ ಮತ್ತು ಯಾವ ಯಾವ ಮಟ್ಟದಲ್ಲಿ ನಡೆಸಲಾಗುವುದು;

ಇ) ವರ್ಗಾವಣೆಗೆ ಸಂಬಂಧಿಸಿದಂತೆ ಶಾಸಕರುಗಳು ನೀಡುವ ಮನವಿಗಳನ್ನು ಯಾವ ರೀತಿ ಸರ್ಕಾರವು ಪುರಸ್ಕರಿಸಲಿದೆ;

ಈ) ವರ್ಗಾವಣೆ ಕುರಿತಂತೆ ಶಿಫಾರಸ್ಸು ನೀಡಿದವರಿಗೆ ಹೊಸದಾಗಿ ಕಾನೂನು ಜಾರಿ ಮಾಡಿ ಅವರ ಮೇಲೆ ಯಾವ ಕ್ರಮವನ್ನು ಜರುಗಿಸಲು ಸರ್ಕಾರವು ಇಚ್ಛಿಸಿದೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧ್ಯಾದೇಶ 2006, ದಿನಾಂಕ:14.12.2006 ರಿಂದ ಜಾರಿಗೆ ಬಂದಿದ್ದು, ಅದರನ್ವಯ ಶಿಕ್ಷಕರ ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರಗಳು ಕೌನ್ಸಿಲಿಂಗ್ ಮೂಲಕ ಮಾತ್ರ ವರ್ಗಾವಣೆಗಳನ್ನು ಮಾಡಬಹುದಾಗಿದೆ.

ಆ) ಈ ಅಧ್ಯಾದೇಶದನ್ವಯ ಶಿಕ್ಷಕರು ನೇಮಕಗೊಂಡು ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಮಾಡುವುದನ್ನು ನಿಷೇಧಿಸಲಾಗಿದೆ. ಘಟಕದೊಳಗಿನ ವರ್ಗಾವಣೆಗೆ ಮಾತ್ರ ಸೇವಾ ಜೇಷ್ಠತೆ, ತೀವ್ರ ಅನಾರೋಗ್ಯ ಅಂಗವಿಕಲತೆ ಮುಂತಾದ ಆಧಾರದ ಮೇಲೆ ಆದ್ಯತಾ ಪಟ್ಟಿ ತಯಾರಿಸಿ ಅದರ ಅನುಸಾರ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ.

ಇ) ದಿನಾಂಕ:14.12.2006ರ ಅಧ್ಯಾದೇಶದನ್ವಯ ಮನವಿಗಳನ್ನು ಪುರಸ್ಕರಿಸಲು ಅವಕಾಶವಿರುವುದಿಲ್ಲ.

ಈ) ಸದರಿ ಅಧ್ಯಾದೇಶದ ಸೆಕ್ಷನ್ 5 ಈ ಕೆಳಕಂಡಂತೆ ಇರುತ್ತದೆ. "ಈ ಅಧ್ಯಾದೇಶದ ಉಪಬಂದಗಳು ಅಥವಾ ಅದರಡಿ ರಚಿಸಲಾದ ನಿಯಮಗಳನ್ನು ಉಲ್ಲಂಘಿಸಿ, ಯಾವೊಬ್ಬ ಸಕ್ಷಮ ಪ್ರಾಧಿಕಾರಿಯು ಸ್ಥಳನಿಯುಕ್ತಿ ಅಥವಾ ನೇಮಕಾತಿಯ ಅಥವಾ ವರ್ಗಾವಣೆಯ ಆದೇಶವನ್ನು ಮಾಡಿದರೆ ಅಥವಾ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರಿಯು ಅಂಥ ಆದೇಶವನ್ನು ಮಾಡುವಂತೆ ಸಕ್ಷಮ ಪ್ರಾಧಿಕಾರಿಗೆ ಪ್ರೇರೇಪಿಸಿದರೆ, ಪ್ರಭಾವ ಬೀರಿದರೆ ಅಥವಾ ಕಟ್ಟಪ್ಪಣೆ ಮಾಡಿದರೆ ಆತನು ಅಪರಾಧ ನಿರ್ಣಯವಾದ ಮೇಲೆ ಐದುಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಒಂದು ತಿಂಗಳನ್ನು ಮೀರದ ಕಾರಾವಾಸದಿಂದ ದಂಡಿತನಾಗತಕ್ಕದ್ದು".

1004 (754) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) 2005–06 ಮತ್ತು 2006–07ನೇ ಸಾಲಿನ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಎಷ್ಟು ರಸ್ತೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ ಹಾಗೂ ಈ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು);